ಪತ್ರಿಕಾ ಪ್ರಕಟಣೆ

**ವಿಜಯಪುರ**
**ದಿನಾಂಕ: 30.08.2021.**

**1] ಎ.ಪಿ.ಎಮ್.ಸಿ ಪೊಲೀಸ ಠಾಣೆ ಗುನ್ನೆ ನಂ: 77/2021 ಕಲಂ; 379 ಐಪಿಸಿ, 41 (1)(ಡಿ) ರೆ/ವು–102 ಸಿ.ಆರ್.ಪಿ.ಸಿ**

ದಿನಾಂಕ 29.08.2021 ರಂದು 06:00 ಗಂಟೆಗೆ ಇದರಲ್ಲಿ ಆರೋಪಿತರಾದ ಆರೋಪಿತನಾದ ನಜೀರ ತಂ:ಸಾಹೇಬಲಾಲ ಜಾತಗಾರ@ಶೇಖ ಜಾತಿ: ಮುಸ್ಲಿಂ, ಸಾ: ರಂಗೀನ ಮಸೀದಿ ಹತ್ತಿರ, ವಿಜಯಪುರ ಈತನು ವಿಜಯಪುರ ಶಹರದ ಇಂಡಿ ರೋಡ ಬೈಪಾಸ್‌ದ ಬಿಜ್ಜರಗಿ ಶೋರೂಮ್ ಮುಂದೆ ರಸ್ತೆಯ ಮೇಲೆ ಸಂಶಯಾಸ್ಪದವಾಗಿ ಕೈಯಲ್ಲಿ ಒಂದು ಚೀಲ ಹಿಡಿದುಕೊಂಡು ತಿರುಗಾಡುತ್ತಿದ್ದು, ಸದರ ಆರೋಪಿತನು ತನ್ನ ಕೈಯಲ್ಲಿದ್ದ ಚೀಲವನ್ನು ಮುಚ್ಚಿಕೋಳ್ಳುತ್ತಿದ್ದಾಗ ಏನು ಮುಚ್ಚಿಕೋಳ್ಳುತ್ತಿರುವೆ ಅಂತಾ ಕೇಳಿದಾಗ ಅವನು ತನ್ನ ಕೈಯಲ್ಲಿರುವ ಚೀಲವನ್ನು ತೆಗೆದು ತೊರಿಸಿದ್ದು ಅದರಲ್ಲಿ 18 ಸ್ಮಾರ್ಟ ಫೋನ್ ಮತ್ತು 01 ಕೀ–ಪ್ಯಾಡ್ ಮೊಬೈಲ್ ಹೀಗೆ ಒಟ್ಟು 19 ಮೊಬೈಲ್ ಫೋನ್ ಗಳು ಒಟ್ಟು ಅ||ಸ||ಕಿ 2,18,800 ರೂ ಕಿಮ್ಮತ್ತಿನ ಮೋಬೈಲ್ ಪೋನ್ ಗಳಿದ್ದು ನಾವು ಅವನಿಗೆ ಇವುಗಳನ್ನು ಎಲ್ಲಿಂದ ತಂದಿರುವೇ ಇವುಗಳ ಬಗ್ಗೆ ನಿನ್ನ ಹತ್ತಿರ ಯಾವುದಾದರು ರಶೀದಿಗಳು ಇವೆಯೋ ಹೇಗೆ ಅಂತಾ ಕೇಳಿದಾಗ ಆತನ ಹತ್ತಿರ ದಾಖಲಾತಿಗಳು ಇರದೇ ಮೋಬೈಲ್ ಪೋನ್ ಗಳನ್ನು ಎಲ್ಲಿಯೋ ಕಳ್ಳತನ ಮಾಡಿಕೊಂಡು ಬಂದು ಅವುಗಳ ಬಗ್ಗೆ ಸಮರ್ಪಕವಾದ ಮಾಹಿತಿ ನೀಡದೇ ಇದ್ದಾಗ ಸಿಕ್ಕ ಅಪರಾಧ. ಈ ಬಗ್ಗೆ ಸ:ತ: ಸೊಮೇಶ ಗೆಜ್ಜಿ. ಪಿ.ಎಸ್.ಐ (ಕಾ&ಸು) ಎ.ಪಿ.ಎಂ.ಸಿ ಪೊಲೀಸ್ ಠಾಣೆ ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 29.08.2021 ರಂದು ಎ.ಪಿ.ಎಮ್.ಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಮನಗೂಳಿ ಪೊಲೀಸ ಠಾಣೆ ಯು.ಡಿ. ನಂ: 15/2021 ಕಲಂ; 174 ಸಿ.ಆರ್.ಪಿ.ಸಿ.**

ದಿನಾಂಕ: 27.08.2021 ರಂದು ಸಂಜೆ 6.45 ಗಂಟೆಯಿಂದ ದಿನಾಂಕ: 29.08.2021ರ ಮದ್ಯಾಹ್ನ 2.00 ಗಂಟೆ ನಡುವಿನ ವೇಳೆಯಲ್ಲಿ ಇದರಲ್ಲಿಯ ವರದಿದಾರರ ಮಗನಾದ ಮಂಜುನಾಥ ತಂದೆ ಸಿದ್ದನಗೌಡ ಪಾಟೀಲ ವಯಾ 22 ವರ್ಷ ಸಾ: ಮುಳ್ಳಾಳ ತಾ: ಬಸವನ ಬಾಗೇವಾಡಿ ಇವನು ವಿಜಯಪುರದಲ್ಲಿ ತನ್ನ ಸಂಬಂಧಿಕರ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರಿಂದ ಪ್ರತಿದಿನ ವಿಜಯಪುರಕ್ಕೆ ಸೈಕಲ ಮೋಟಾರ ಮೇಲೆ ಹೋಗಿ ಬರುವದು ಮಾಡುತ್ತಿದ್ದು, ಅದರಂತೆ ದಿನಾಂಕ: 27.08.2021 ರಂದು ಮುಂಜಾನೆ 8.00 ಗಂಟೆಗೆ ಮೃತನು ತನ್ನ ಬೈಕ ಮೇಲೆ ವಿಜಯಪುರಕ್ಕೆ ಹೋಗಿ ಮರಳಿ ವಿಜಯಪುರದಿಂದ ಮುಳ್ಳಾಳಕ್ಕೆ ಬರುವ ಸಲುವಾಗಿ ಅವನ ಗೆಳೆಯ ಸಾಕ್ಷಿದಾರ ಇಮಾಮಸಾಬ ಖಾಜೇಸಾಬ ನದಾಫ ಸಾ: ಮುಳ್ಳಾಳ ಇಬ್ಬರೂ ಕೂಡಿ ಬೈಕ ಮೇಲೆ ಬರುವಾಗ ನೇಗಿನಾಳದಾಟಿ ಇರುವ ಹಳ್ಳದ ಹತ್ತಿರ ರಸ್ತೆಯ ಮೇಲೆ ಹಳ್ಳ ದಾಟುವಾಗ ಅಕಸ್ಮಾತ ಹಳ್ಳದ ರಭಸದ ನೀರಿಗೆ ಸಿಕ್ಕು ಮೋಟಾರ ಸೈಕಲ ಸಮೇತ ಇಬ್ಬರೂ ಕೊಚ್ಚಿಕೊಂಡು ಹೋಗಿದ್ದು ಅಲ್ಲದೇ ಸಾಕ್ಷಿದಾರ ಇಮಾಮದಾಬ ನದಾಫ ಇವನು ನೀರಿನಿಂದ ಇಜಿ ಬಂದಿದ್ದು, ವರದಿದಾರ ಮಗ ಮಂಜುನಾಥ ನೀರಿನಲ್ಲಿ ಮುಳಗಿ ಹರಿದುಕೊಂಡು ಹೋಗಿ ಈ ದಿವಸ ದಿನಾಂಕ: 29.08.2021 ರಂದು ಮದ್ಯಾಹ್ನ 2.00 ಗಂಟೆ ಸುಮಾರಿಗೆ ಡೋಣಿ ಹಳ್ಳದಲ್ಲಿ ಮೃತನ ಸಿಕ್ಕಿದ್ದು ಅದೆ ಹೊರತು ಅವನ ಮರಣದಲ್ಲಿ ಯಾವುದೇ ಸಂಶಯ ಇರುವದಿಲ್ಲ ಅಂತ ವರದಿಯಲ್ಲಿ ನಮೂದ ಮಾಡಿರುತ್ತಾರೆ. ಈ ಬಗ್ಗೆ ಸಿದ್ದನಗೌಡ ತಂದೆ ರಾಮನಗೌಡ ಪಾಟೀಲ. ಸಾ: ಮುಳ್ಳಾಳ ತಾ: ಬಸವನ ಬಾಗೇವಾಡಿ ರವರು ಕೊಟ್ಟ ಪಿರ್ಯಾದಿ ಮೇರೆಗೆ ದಿನಾಂಕ: 29.08.2021 ರಂದು ಮನಗೂಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.